ರಾಜ್ಯದಲ್ಲಿ ಖಾಲಿ ಇರುವ ವಿದ್ಯಾಧಿಕಾರಿಗಳ ಹುದ್ದೆಗಳು

೨೧೮೩ ಶ್ರೀ ಹೆಚ್. ಕೆ. ಕುಮಾರಸ್ವಾಮಿ (ಬೇಲೂರು).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(೨) ರಾಜ್ಯದಲ್ಲಿ ಖಾಲಿ ಇರುವ ವಿದ್ಯಾಧಿಕಾರಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

(೩) ಹಾಗಿದ್ದಲ್ಲಿ, ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು,

(೪) ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಸಹಾಯಕ ವಿದ್ಯಾ ಅಧಿಕಾರಿಗಳಿಗೆ ಮುಂಬಡ್ತಿ ಕೊಡದಿರಲು ಕಾರಣವೇನು, (ಸಹಾಯಕ ವಿದ್ಯಾಧಿಕಾರಿಗಳವರೆಗೆ).

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

(೨) ೭೨.

ಬೆಂಗಳೂರು ವಿಭಾಗ		ಮೈಸೂರು ವಿಭಾಗ	
ಬೆಂಗಳೂರು	೧೭	ಮೈಸೂರು	೮
ಕೋಲಾರ	೩	ಮಂಡ್ಯ	೧
ಚಿತ್ರದುರ್ಗ	೧	ಹಾಸನ	೩
ಶಿವಮೊಗ್ಗ	೧	ಕೊಡಗು	೧
ತುಮಕೂರು	೩	ದಕ್ಷಿಣ ಕನ್ನಡ	೪
		ಚಿಕ್ಕಮಗಳೂರು ಇಲ್ಲ.	

ಬೆಳಗಾಂ ವಿಭಾಗ		ಗುಲ್ಬರ್ಗಾ ವಿಭಾಗ	
ಬೆಳಗಾಂ	೬	ಗುಲ್ಬರ್ಗಾ	೭
ಬಿಜಾಪುರ	೫	ಬೀದರ್	೨
ಧಾರವಾಡ	೩	ರಾಯಚೂರು	೨
ಉತ್ತರ ಕನ್ನಡ	೩	ಬಳ್ಳಾರಿ	೨

(೩) ಎಲ್ಲಾ ಖಾಲಿ ಹುದ್ದೆಗಳನ್ನು ತುಂಬಲು ತುರ್ತು ಕ್ರಮ ಕೈಗೊಳ್ಳಲಾಗಿದೆ.

(೪) ಜೇಷ್ಠತಾ ಪಟ್ಟಿಯ ಬಗ್ಗೆ ನ್ಯಾಯಾಲಯದಲ್ಲಿ ಮೊಕದ್ದಮೆಗಳಿದ್ದುದರಿಂದ ತಡವಾಗಿದೆ. ಅತಿ ಶೀಘ್ರದಲ್ಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಶ್ರೀ ಹೆಚ್. ಕೆ. ಕುಮಾರಸ್ವಾಮಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಉತ್ತರದ ಪ್ರಕಾರವೇ, ಬೆಂಗಳೂರಿನಲ್ಲಿ ಸುಮಾರು ೧೭ ವಿದ್ಯಾಧಿಕಾರಿಗಳ ಪೋಸ್ಟ್ ಖಾಲಿ ಇವೆ, ಹಾಸನ ಜಿಲ್ಲೆಯಲ್ಲಿ ೩ ಪೋಸ್ಟ್‌ಗಳು ಖಾಲಿ ಇವೆ. ತಮ್ಮ ಗಮನಕ್ಕೆ ತರಬಯಸುವ ಇನ್ನೊಂದು ವಿಚಾರ ಎಂದರೆ ಈ ಹುದ್ದೆಗಳು ಇಂದಿನಿಂದ ಖಾಲಿ ಇಲ್ಲ, ಇದು ನಾಲ್ಕು ವರ್ಷಗಳಿಂದ ಖಾಲಿ ಇವೆ. ಹಾಸನ ಜಿಲ್ಲೆಯಲ್ಲಿರತಕ್ಕ ಮೂರು ಸಹಾಯಕ ವಿದ್ಯಾಧಿಕಾರಿಗಳಿಗೂ ಸಹ ಸಬ್ಜೆಕ್ಟ್ ಇನ್ಸ್‌ಪೆಕ್ಟರ್‌ಗಳೇ ಇನ್‌ಚಾರ್ಜ್ ಇದ್ದಾರೆ. ಅಲ್ಲಿ ಡಿ.ಡಿ.ಪಿ.ಐ. ಪೋಸ್ಟ್ ಸಹ ಖಾಲಿ ಇದೆ. ಹೀಗೆ ನಾಲ್ಕು ವರ್ಷದಿಂದ ಹುದ್ದೆಗಳು ಖಾಲಿ ಇದ್ದರೆ ಆಡಳಿತ ಕುಂಠಿತವಾಗುವುದಿಲ್ಲವೇ ? ಇದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ. ಸೋಮಶೇಖರ್.—ಇದೇ ವಿಚಾರದ ಬಗ್ಗೆ ಮಾನ್ಯ ಮತ್ತೊಬ್ಬ ಸದಸ್ಯರು ಪ್ರಶ್ನೆ ಕೇಳಿದಾಗ ನಾನು ಈ ಹುದ್ದೆಗಳನ್ನು ೧೫ ದಿನಗಳ ಒಳಗಾಗಿ ತುಂಬುತ್ತೇನೆಂದು ಆಶ್ವಾಸನೆ ಕೊಟ್ಟಿದ್ದೇನೆ. ಈ ಆಶ್ವಾಸನೆಯನ್ನು ಕೊಟ್ಟು ೮ ದಿನ ಆಗಿದೆ, ಇನ್ನು ಎಂಟು ದಿನದ ಒಳಗಾಗಿ ಈ ಪೋಸ್ಟನ್ನು ತುಂಬಿ ಆದೇಶ ಹೊರಡಿಸುತ್ತೇನೆ.